ಆ. ತುಮಕೂರು ಶಾಖಾ ನಾಲೆಯ ಎಲ್ಲಾ ಕಾಮಗಾರಿಗಳನ್ನು 2010–11ರೊಳಗೆ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇ. ಕುಣಿಗಲ್ ದೊಡ್ಡಕೆರೆಗೆ ಈಗಾಗಲೇ ನೀರು ಹರಿಸಲಾಗಿದ್ದು, ನೀರನ್ನು ಸರಾಗವಾಗಿ ಹರಿಸಲು ನಾಲೆಯಲ್ಲಿ ನೀರು ಹರಿಯುವಿಕೆಯಲ್ಲಿನ ಸಧ್ಯದ ಸಣ್ಣಪುಟ್ಟ ಅಡತಡೆಗಳಾದ ಹೂಳು ತೆಗೆಯುವುದು ಇತ್ಯಾದಿ ಕೆಲಸ ಕೈಗೆತ್ತಿಕೊಳ್ಳಲಾಗಿದೆ. ವಿನ್ಯಾಸದ ಹರಿವನ್ನು ಹರಿಯಬಿಡಲು ತುಮಕೂರಿನಿಂದ ಕುಣಿಗಲ್‌ವರೆಗಿನ ಎಲ್ಲಾ 59 ಕಿ.ಮೀ. ಲೈನಿಂಗ್ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

1611(2098)ಶ್ರೀ ನಿಂಗಪ್ಪ ಹೆಚ್ (ಕುಣಿಗಲ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಕುಣಿಗಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದೂರದ ಹಳ್ಳಿಗಳಿಗೆ ಬಸ್ ಸೌಕರ್ಯ ಕಲ್ಪಿಸಲು ಆದಾಯವನ್ನೆ ಆದ್ಯತೆಯನ್ನಾಗಿ ಪರಿಗಣಿಸಿ ಅಧಿಕಾರಿಗಳು ನಿರಾಕರಿಸುತ್ತಿರುವುದರಿಂದ, ಸೇವಾ ದೃಷ್ಟಿಯಿಂದ ಪರಿಗಣಿಸಿ ಸೌಕರ್ಯ ಕಲ್ಪಿಸಲು ಸರ್ಕಾರ ಗಮನ ಹರಿಸುವುದೆ;

ಆ. ಈ ಬಗ್ಗೆ ಸರ್ಕಾರ ಸ್ಪಷ್ಟ ಆದೇಶ ಹೊರಡಿಸುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ನಿರಾಕರಿಸುತ್ತಿಲ್ಲ.

ಆ. ಉದ್ಭವಿಸುವುದಿಲ್ಲ.

1612(2099) ಶ್ರೀ ನಿಂಗಪ್ಪ ಹೆಚ್ (ಕುಣಿಗಲ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಕುಣಿಗಲ್ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಇಪ್ಪಡಿ ಗ್ರಾಮ ಸಮೀಪದ ಮುದ್ದರಂಗನ ಕೆರೆ ಒಡೆದು ಹೋಗಿ ಬಹಳ ವರ್ಷಗಳಾಗಿರುವುದು ನಿಜವಲ್ಲವೇ; ಹಾಗಿದ್ದಲ್ಲಿ ಅದರ ಪುನರ್ ನಿರ್ಮಾಣದ ಬಗ್ಗೆ ಸರ್ಕಾರ ಈ ತನಕ ಅವಶ್ಯಕ ಕ್ರಮ ಕೈಗೊಳ್ಳದಿರುವ ಕಾರಣವೇನು;

ಆ. ಪುನರ್ ನಿರ್ಮಾಣದ ಬಗ್ಗೆ ಸರ್ಕಾರ ಶೀಘ್ರ ಗಮನ ಹರಿಸುವುದೇ;

ಇ. ಹಾಗಿದ್ದಲ್ಲಿ, ಯಾವ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ. ಸುಮಾರು 100 ವರ್ಷಗಳ ಹಿಂದೆ ಒಡೆದುಹೋಗಿರುವುದು ನಿಜ ಅನುದಾನ ಲಭ್ಯವಿಲ್ಲದ ಕಾರಣ ಮತ್ತು ಅರಣ್ಯ ಇಲಾಖೆಯು ಸುಮಾರು 36 ಎಕರೆ ಜಮೀನು ಪಡೆಯಬೇಕಾಗಿರುವುದರಿಂದ ಪುನರ್ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗಿಲ್ಲ.

ಆ. ಪುನರ್ ನಿರ್ಮಾಣದ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಪ್ರಯತ್ನಿಸಲಾಗುವುದು.

1613(2100)ಶ್ರೀ ಹೆಚ್. ನಿಂಗಪ್ಪ (ಕುಣಿಗಲ್) ಸನ್ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಗ್ರಾಮೀಣ ಪ್ರದೇಶದಲ್ಲಿ ಜನರಾಡುವ ನಾಟಕಗಳಿಗೆ ಪ್ರೋತ್ಸಾಹ ಧನದ ಮೊತ್ತವನ್ನು ನಿಗದಿಗೊಳಿಸಲಾಗಿದೆಯೇ;